ಕರ್ನಾಟಕಸರ್ಕಾರ

(ಕಂದಾಯಇಲಾಖೆ)

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ, ಮೈಸೂರು

ದೂರವಾಣಿ ಸಂಖ್ಯೆ:0821-2424079,2422110,2428383

ಫ್ಯಾಕ್ಸ್ನಂ : 2429012 & 2428383 E-Mail : dcofficemysuru@gmail.com

ಸಂಖ್ಯೆ :MYSDC- MAG1 /MLO/71/2020 ದಿನಾಂಕ: 21 /03/2020

ವಿಷಯ: ಕೋವಿಡ್-19 (ಕರೊನಾ ವೈರಾಣು ಕಾಯಿಲೆ-2019)ಯ ಸ್ಫೋಟ ಮತ್ತು ಹರಡುವುದನ್ನು ತಡೆಗಟ್ಟಲು ಹೆಚ್ ಡಿ ಕೋಟೆ ತಾಲ್ಲೂಕಿನಲ್ಲಿರುವ ಅಂತರ್ ರಾಜ್ಯ ಗಡಿಯ ಮೂಲಕ ಮೈಸೂರು ಜಿಲ್ಲೆಗೆ ವಾಹನ ಸಂಚಾರವನ್ನು ನಿರ್ಬಂಧಿಸುವ ಬಗ್ಗೆ.

COVID-19

ಉಲ್ಲೇಖ:
1. ಕರ್ನಾಟಕ ಸಾಂಕ್ರಾಮಿಕ ರೋಗಗಳು, COVID-19 ರೆಗ್ಯೂಲೇಷನ್ಸ್ -2020ರ ಅಧಿಸೂಚನೆ ಸಂಖ್ಯೆ: ಹೆಚ್.ಎಫ್,ಡಬ್ಲ್ಯೂ,54 ಸಿ ಜಿ ಎಂ 2020 ದಿನಾಂಕ: 11.03.2020.
2. ಸರ್ಕಾರದ ಕಂದಾಯ ಇಲಾಖೆಯ ಆದೇಶ ಸಂಖ್ಯೆ: ಆರ್.ಡಿ.157 ಟಿ ಎನ್ ಆರ್ 2020, ದಿನಾಂಕ:14.03.2020
3. ಮಾನ್ಯ ಕಂದಾಯ ಸಚಿವರು ಕರ್ನಾಟಕ ಸರ್ಕಾರ ರವರ ಪತ್ರದ ಸಂಖ್ಯೆ: ಕಂ.ಸ 678 / 2020 ದಿನಾಂಕ: 18.03.2020
4. ಈ ಕಛೇರಿಯ ಇದೇ ಸಮಸಂಖ್ಯೆಯ ನಡವಳಿ ದಿನಾಂಕ: 21.03.2020

DISTRICT MAGISTRATE MYSORE DISTRICT

*****

ಪ್ರಸ್ತಾವನೆ:

ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ COVID-19 ಸೋಂಕು ಹರಡದಂತೆ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲು ಹಾಗೂ ವೈಯಕ್ತಿಕ ಮತ್ತು ಸಮುದಾಯದ ತುರ್ತು ಪರಿಸ್ಥಿತಿಯನ್ನು ಎದುರಿಸಲು ಈಗಾಗಲೇ ಕ್ರಮಗಳನ್ನು ತೆಗೆದುಕೊಳ್ಳಲಾಗಿರುತ್ತದೆ.

ರಾಜ್ಯದಲ್ಲಿ ಕೊರೊನಾ ರೋಗಾಣು ಹರಡುತ್ತಿರುವ ಬಗ್ಗೆ ಹಿನ್ನೆಲೆಯಲ್ಲಿ ಸರ್ಕಾರವು ಉಲ್ಲೇಖ (2) ರ ಆದೇಶದಲ್ಲಿ Disaster Management Act 2005 ರ ವಿಧಿ 22 ರ ಉಪಪ್ರಕರಣ 2 (H) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸದರಿ ಕಾಯ್ದೆಯ ಕಲಂ 24 (a) (b) (f) (h) (j) (k) ಮತ್ತು (l) ರಡಿ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರಿಗೆ (ಜಿಲ್ಲಾಧಿಕಾರಿಗಳು) COVID-19 ಸಾಂಕ್ರಾಮಿಕ ರೋಗವನ್ನು ತಡೆಗಟ್ಟುವ ನಿಟ್ಟಿನಲ್ಲಿ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲು ಆದೇಶಿಸಲಾಗಿರುತ್ತದೆ.

ಮೈಸೂರು ಜಿಲ್ಲೆಗೆ ಹೊಂದಿಕೊಂಡಿರುವ ಕೇರಳ ರಾಜ್ಯದಿಂದ ಹಲವು ವಾಹನಗಳು ಮೈಸೂರು ಜಿಲ್ಲೆಗೆ ಪ್ರತಿನಿತ್ಯ ಸಂಚರಿಸುತ್ತಿದ್ದು, ಕೇರಳ ರಾಜ್ಯದಲ್ಲಿಯೂ ಸಹಾ ಕೊರೊನಾ ಸೋಂಕಿತರು ಇರುವುದು ಕಂಡುಬಂದಿರುವುದರಿಂದ ಹಾಗೂ ಹಲವರು ಕೊರೊನಾ ಸೋಂಕಿತರಾಗಿರುವುದಾಗಿ ಶಂಕಿತರಾಗಿರುವುದರಿಂದ ಮೈಸೂರು ಜಿಲ್ಲೆಯಲ್ಲಿಯೂ ಸಹಾ ಕೊರೊನಾ ವೈರಾಣು ಹರಡದಂತೆ ತಡೆಯುವುದು ಅತ್ಯಗತ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಕೇರಳ ರಾಜ್ಯದಿಂದ ಮೈಸೂರು ಜಿಲ್ಲೆಗೆ ಬರುವಂತಹ ವಾಹನಗಳನ್ನು ನಿರ್ಬಂಧಿಸುವ ಸದುದ್ದೇಶದಿಂದ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

......2

# ಆದೇಶ

MYSDC/MAG1/MLO/71(6)/2020(E-95753) ದಿನಾಂಕ: 21-03-2020

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಅಭಿರಾಮ್ ಜಿ ಶಂಕರ್, ಭಾ.ಆ.ಸೇ. ಜಿಲ್ಲಾಧಿಕಾರಿ ಮತ್ತು ಜಿಲ್ಲಾ ದಂಡಾಧಿಕಾರಿ, ಮೈಸೂರು ಜಿಲ್ಲೆ ಆದ ನಾನು ಕರ್ನಾಟಕ ಸಾಂಕ್ರಾಮಿಕ ರೋಗಗಳು, COVID-19 ರೆಗ್ಯೂಲೇಷನ್ಸ್-2020ರ ನಿಯಮ 12 ರಲ್ಲಿ ಹಾಗೂ **Disaster Management Act 2005** ಕಲಂ 24(a),(b), 30(2) ರಡಿಯಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಹೆಚ್ ಡಿ ಕೋಟೆ ತಾಲ್ಲೂಕು ಅಂತರಸಂತೆ ಹೋಬಳಿ, ಡಿ ಬಿ ಕುಪ್ಪೆ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಬಾವಲಿ ಚೆಕ್ ಪೋಸ್ಟ್ ಮೂಲಕ ಕೇರಳ ರಾಜ್ಯದಿಂದ ಒಳ ಬರುವಂತಹ ಎಲ್ಲಾ ವಾಹನಗಳ ಸಂಚಾರವನ್ನು ತಕ್ಷಣದಿಂದ ಜಾರಿಗೆ ಬರುವಂತೆ ನಿರ್ಬಂಧಿಸಿ ಆದೇಶ ಹೊರಡಿಸಿದೆ.

ತುರ್ತು ಅಗತ್ಯ ಸೇವೆಗಳು ಹಾಗೂ ಪ್ರಕರಣವಾರು ಅಗತ್ಯತೆಯನ್ನು ಆಧರಿಸಿ ಇತರೆ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡಲು ಈ ಆದೇಶದಿಂದ ವಿನಾಯಿತಿ ನೀಡಲಾಗಿದೆ.

ಈ ಆದೇಶವನ್ನು ನನ್ನ ಸಹಿ ಮತ್ತು ಮೊಹರಿನೊಂದಿಗೆ ಈ ದಿನ ದಿನಾಂಕ: 21. 03.2020 ರಂದು ಹೊರಡಿಸಿದೆ.

DISTRICT MAGISTRATE MYSORE DISTRICT

21/3

(ಅಭಿರಾಮ್ ಜಿ. ಶಂಕರ್)
ಜಿಲ್ಲಾಧಿಕಾರಿ
ಹಾಗೂ ಜಿಲ್ಲಾ ದಂಡಾಧಿಕಾರಿ
ಮೈಸೂರು ಜಿಲ್ಲೆ, ಮೈಸೂರು

ಪ್ರತಿಯನ್ನು:-ಕೆಳಕಂಡವರಿಗೆ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.

1. ಪೋಲೀಸ್ ಅಧೀಕ್ಷಕರು, ಮೈಸೂರು ಜಿಲ್ಲೆ, ಮೈಸೂರು
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮೈಸೂರು
3. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.
4. ಉಪವಿಭಾಗಾಧಿಕಾರಿಗಳು, ಹುಣಸೂರು ಉಪವಿಭಾಗ.
5. ತಹಶೀಲ್ದಾರ್ ಹೆಚ್ ಡಿ ಕೋಟೆ ತಾಲ್ಲೂಕು
6. ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ. ಹೆಚ್ ಡಿ ಕೋಟೆ
7. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಹುಣಸೂರು
8. ಉಪ ನಿರ್ದೇಶಕರು, ವಾರ್ತಾ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು ರವರಿಗೆ ಕಳುಹಿಸುತ್ತಾ ದೈನಂದಿನ ಪತ್ರಿಕೆಗಳಲ್ಲಿ ಮೇಲ್ಕಂಡ ವಿಷಯವನ್ನು ಸುದ್ದಿರೂಪದಲ್ಲಿ ಪ್ರಕಟಿಸಲು ಕೋರಿದೆ.
9. ನಿಲಯ ನಿರ್ದೇಶಕರು, ಆಕಾಶವಾಣಿ, ಯಾದವಗಿರಿ, ಮೈಸೂರು ಇವರಿಗೆ ಮಾಹಿತಿಗೆ ಮತ್ತು ನಿಲಯದ ಮೂಲಕ ವಿಷಯ ಪ್ರಕಟಿಸುವ ಸಲುವಾಗಿ.